ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧೨ನೇ ಮೇ ೧೯೮೮, ವೈಶಾಖ ೨೨, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೮ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಶರಾವತಿ ಟೇಲ್‌ರೇಸ್ ಯೋಜನೆ ಬಗ್ಗೆ

೧೩೧೦ ಶ್ರೀ ಆರ್. ಎನ್ ನಾಯ್ಕ (ಭಟ್ಕಳ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) "ಶರಾವತಿ ಟೇಲ್‌ರೇಸ್" ಯೋಜನೆಯನ್ನು ಕಾರ್ಯಗತಗೊಳಿಸದಿರಲು ಚಳುವಳಿ ಏನಾದರೂ ನಡೆದಿದೆಯೇ

ಆ) ಹಾಗಿದ್ದಲ್ಲಿ ಅಂಥ ಚಳುವಳಿಯನ್ನು ಪತ್ತೆಹಚ್ಚಲು ಸರ್ಕಾರ ಕೈಕೊಂಡ ಕ್ರಮಗಳೇನು,

ಇ) ಕೆಲಸಕ್ಕೆ ಹೋಗಬಯಸುವವರನ್ನು ತಡೆಯುವವರನ್ನು, ಕಾನೂನಿನ ರೀತ್ಯಾ ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿದೆಯೇ,

ಈ) ಯೋಜನೆ ಪೂರ್ಣಗೊಂಡಾಗ ವಿದ್ಯುಚ್ಛಕ್ತಿ ಎಷ್ಟು ಹಾಗೂ ಇದಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ಇಂತಹ ಚಳುವಳಿಗಳು ನಡೆದಿವೆ.

ಆ) ಮತ್ತು ಇ) ಚಳುವಳಿಗಾರರ ಪ್ರತಿನಿಧಿಗಳೊಡನೆ ಚರ್ಚೆಗಳನ್ನು ನಡೆಸಿ ಯೋಜನೆಯ ಪ್ರಾಮುಖ್ಯತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಲಾಯಿತು. ಮತ್ತು ಕೆಲವು ಸಲಹೆಗಳನ್ನು ಕಾರ್ಯಗತ ಮಾಡುವುದಾಗಿ ನಿರ್ಧರಿಸಲಾಯಿತು. ಆದಾಗ್ಯೂ ಕೆಲವು ಚಳುವಳಿಗಾರರು ತಡೆಯಲು ಪ್ರಯತ್ನಿಸಿದಾಗ ಪೋಲೀಸ್ ಇಲಾಖೆಯ ಸಹಾಯವನ್ನು ಕೋರಲಾಗಿತ್ತು

ಈ) ಈ ಯೋಜನೆಯಲ್ಲಿ ಸ್ಥಾಪಿತ ಸಾಮರ್ಥ್ಯ ೨೪೦ ಮೆಗಾವಾಟ್ ಇದ್ದು ೭೨೦ ವಾರ್ಷಿಕ ೬೨೨ ದಶಲಕ್ಷ ಯೂನಿಟ್ಟುಗಳನ್ನು ಉತ್ಪಾದಿಸುವ ಗುರಿ ಇದೆ. ಮಾರ್ಚ್ ೧೯೮೬ ರಿಂದೀಚೆಗಿನಂತೆ ಈ ಯೋಜನೆಯ ವೆಚ್ಚ ೨೧೨ ಕೋಟಿ ರೂಪಾಯಿಗಳು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು 'ಆ' ಮತ್ತು 'ಇ' ಎರಡನ್ನೂ ಒಂದುಕಡೆ ಕೂಡಿಸಿ ಉತ್ತರ ಕೊಟ್ಟಿದ್ದಾರೆ. ಆಮೇಲೆ, ''ಕೆಲಸಕ್ಕೆ ಹೋಗುವವರನ್ನು ತಡೆಯುವವರನ್ನು, ಕಾನೂನಿನ ರೀತ್ಯಾ ಶಿಕ್ಷೆಗೆ ಗುರಿಪಡಿಸಲು ಸಾಧ್ಯವಿದೆಯೇ? ಎಂದು ಕೇಳಿದ್ದೇನೆ. ಶರಾವತಿ ಯೋಜನೆಯಲ್ಲಿ ಕೆಲಸಕ್ಕೆ ಹೋಗುವವರನ್ನು ಅಡ್ಡಗಟ್ಟಿ ತಡೆಯುತ್ತಿದ್ದಾರೆ. ಸರ್ಕಾರಿ ಕೆಲಸಕ್ಕೆ ಆತಂಕ ಕೊಡುವವರಿಗೆ, ಶಿಕ್ಷೆ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ? ಹಾಗಾದರೆ, ನೀವು ಶಿಕ್ಷೆ ಮಾಡುತ್ತೀರಾ? ಎರಡನೆಯದು, ಪ್ರತಿ ಯೂನಿಟ್‌ಗೆ ವಿದ್ಯುತ್ ಪೂರೈಸುವಾಗ ಎಷ್ಟು ಖರ್ಚಾಗುತ್ತದೆ? ಮೂರನೆಯದು, ನೀವು ಕೆಲವು ಸಲಹೆಗಳನ್ನು ಕಾರ್ಯಗತ ಮಾಡಲಾಗುವುದು ಎಂದು ಉತ್ತರಕೊಟ್ಟಿದ್ದೀರಿ. ಯಾವ ಯಾವ ಸಲಹೆಗಳನ್ನು ಕಾರ್ಯಗತ ಮಾಡುತ್ತೀರಿ. ನನ್ನ ತಿಳುವಳಿಕೆ ಪ್ರಕಾರ ಅವರ ಬೇಡಿಕೆ ಏನಿದೆ ಎಂದರೆ, ಉತ್ತರ ಕನ್ನಡ ಜಿಲ್ಲೆಗೆ ೨೪ ತಾಸು ವಿದ್ಯುತ್ ಪೂರೈಸಬೇಕು ಮತ್ತು ಅಲ್ಲಿನ ಕೆಲಸಕಾರ್ಯಗಳಿಗೆ, ಸರ್ಕಾರಿ ನೌಕರಿಗೆ ಅಥವಾ ಕಾರ್ಪೊರೇಷನ್‌ಗೆ ಉತ್ತರ ಕನ್ನಡ ಜಿಲ್ಲೆಯವರನ್ನೇ ತೆಗೆದುಕೊಳ್ಳಬೇಕೆಂದು ಬೇಡಿಕೆ ಇದೆ. ಈ ಬೇಡಿಕೆಗಳನ್ನು ಪೂರೈಸುತ್ತೀರಾ? ಶರಾವತಿ ಟೇಲ್‌ರೇಸ್ ವಿದ್ಯುತ್ ಯೋಜನೆಯನ್ನು ಯಾವರೀತಿ ಕಾರ್ಯಗತಗೊಳಿಸುತ್ತೀರಿ, ಆದೇರೀತಿ ನೆನೆಗುದಿಗೆ ಬಿದ್ದಿರುವ ಬೇಡ್ತಿ, ಅಘನಾಶಿನಿ ಜಲ ವಿದ್ಯುತ್ ಯೋಜನೆಗಳನ್ನೂ ಕಾರ್ಯಗತಗೊಳಿಸುತ್ತೀರಾ, ಹೇಗೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯಸಭಾಧ್ಯಕ್ಷರೇ, ಈ ಕೆಲಸ ಪ್ರಾರಂಭವಾದಾಗ, ಕೆಲವು ಸಮಿತಿಗಳನ್ನು ನೇಮಕ ಮಾಡಿಕೊಂಡು ಅಡೆತಡೆ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಕೋರ್ಟಿಗೆ ಹೋಗಿ ''ಸ್ಟೇ'' ತಂದಿದ್ದಾರೆ. ಅವರನ್ನು ಕರೆಯಿಸಿ ಮಾತನಾಡಿ ಕೋರ್ಟ್ ಸ್ಟೇ ಕೊಟ್ಟಿದ್ದ ಭಾಗಗಳನ್ನು ಹೊರತುಪಡಿಸಿ, ಮಿಕ್ಕ ಕೆಲಸಗಳನ್ನು ಮಾಡಿದ್ದೇವೆ, ಕಾನೂನುಪ್ರಕಾರ, ಕೆಲಸಮಾಡುವಾಗ ಅಡ್ಡಿ ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ, ಇಲ್ಲದೇಹೋದರೆ ಕೆಲಸ ಮುಂದುವರಿಸುವುದಕ್ಕಾಗುವುದಿಲ್ಲ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆ, ಮಾಡಿಯೇ ಮಾಡುತ್ತೇವೆ. ಜೊತೆಗೆ, ಅಲ್ಲಿರತಕ್ಕಂಥ ಅನೇಕ ಬೇಡಿಕೆಗಳಲ್ಲಿ, ಸಾಮಾನ್ಯವಾಗಿ ೨೪ ಗಂಟೆ ವಿದ್ಯುತ್ ಒದಗಿಸಬೇಕೆಂಬುದೇ ನಮ್ಮ ಮಂಡಳಿ ಮತ್ತು ಕೆ.ಪಿ.ಸಿ. ಅವರ ಉದ್ದೇಶ. ಭಾರಿ ಜಲವಿದ್ಯುತ್ ಯೋಜನೆಗಳಲ್ಲಿ ನೀರು ತುಂಬದೇ ಇದ್ದ ಕಾರಣದಿಂದ ಮಾತ್ರ ವಿದ್ಯುತ್ ಪೂರೈತಾ ಮಾಡಿದ್ದೇವೆಯೇ ಹೊರತು, ಯಾವಾಗಲೂ ೨೪ ಗಂಟೆ ವಿದ್ಯುತ್ ಒದಗಿಸುವುದು ನಮ್ಮ ಪಾಡಿಕೆ. ಅವರಿಗೋಸ್ಕರ ಪ್ರತ್ಯೇಕವಾದ ಕಾನೂನಿನ ಅವಕಾಶವನ್ನು ಮಾಡಬೇಕಾದಂಥ ಅವಶ್ಯಕತೆ ಇಲ್ಲ ಎನ್ನುವುದು ನನ್ನ ಭಾವನೆ. ಆ ಭಾಗದವರಿಗೆ ಕೆಲಸಗಳನ್ನು ಕೊಡಬೇಕಾದರೆ, ತರಬೇತಿ ಹೊಂದಿರಬೇಕು ಹಾಗೂ ಟೆಕ್ನಿಕಲ್ ವಿದ್ಯಾರ್ಹತೆಯನ್ನು ಪಡೆದವರಿಗೆ ಕೊಡಬೇಕಾಗುತ್ತದೆ. ವಾರಾಹಿ ಪ್ರಾಜೆಕ್ಟ್ ಈಗಾಗಲೇ ಮುಗಿಯುಂತ್ತಾ ಬಂದಿದ್ದು, ಅಲ್ಲಿರುವವರನ್ನೇ ಇಲ್ಲಿಗೆ ಡೆಪ್ಯೂಟ್ ಮಾಡುತ್ತೇವೆ. ಹೊಸದಾಗಿ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಆದ್ಯತೆ ಕೊಡುವುದರಲ್ಲಿ ಅಡ್ಡಿ ಇಲ್ಲ.

ಶ್ರೀ ಆರ್. ಎನ್. ನಾಯಕ್.—ಹೊಸದಾಗಿ ತೆಗೆದುಕೊಳ್ಳತಕ್ಕ ಸಂದರ್ಭ ಬಂದಾಗ, ಉತ್ತರ ಕನ್ನಡ ಜಿಲ್ಲೆಯವರನ್ನೇ ತೆಗೆದುಕೊಳ್ಳಬೇಕೆಂಬ ರೀತಿಯಲ್ಲಿ ಸರ್ಕಾರಿ ಆದೇಶಗಳನ್ನು ಕೊಡುತ್ತೀರಾ. ಹೇಗೆ? ಆಮೇಲೆ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೀರಿ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿರುವ ಬೇಡ್ತಿ, ಅಘನಾಶಿನಿ ಯೋಜನೆಗಳನ್ನೂ ಸಹ ಕಾರ್ಯಗತಗೊಳಿಸುತ್ತೇವೆ ಎನ್ನುವ ಬಗ್ಗೆ ತಾವು ಹೇಳಬೇಕು.

ಇದರಲ್ಲಿ ಇನ್ನೊಂದು ವಿಚಾರ ಇದೆ. ಈ ಶರಾವತಿ ಯೋಜನೆ ಕೆಲಸಕ್ಕೆ ಆಚೆತಡೆ ಒಡ್ಡುವವರು ಜನತಾ ಪಕ್ಷಕ್ಕೆ ಸೇರಿದವರಾಗಿದ್ದಾರೆ. ಅಲ್ಲಿಯ ಜನತಾ ಪಕ್ಷದ ಪದಾಧಿಕಾರಿಗಳು ಇದರಲ್ಲಿ ಇದ್ದಾರೆ...

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ನಾಯಕರ ತಲೆಯ ಒಳಗೆ ಇರತಕ್ಕಂಥ ಶಾಶ್ವತವಾದ ಹುಳ ಇದು.

ಶ್ರೀ ಆರ್. ಎನ್. ನಾಯಕ್.—ಇಂತಹ ಒಂದು ಯೋಜನೆ ಕಾರ್ಯಗತ ಆಗಬೇಕೆಂದು ಒತ್ತಾಯ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಇದನ್ನು ನಾನು ಹೇಳಬಾರದೇ? ಅವರು ಜನತಾ ಪಕ್ಷದಲ್ಲಿ ಕೆಲಸ ಮಾಡುವವರಾಗಿದ್ದಾರೆ ಎಂಬುದನ್ನು ನಾನು ಹೇಳಬಾರದೇ?

ಅಲ್ಲಿಯ ಜಿಲ್ಲಾ ಪರಿಷತ್ ಸದಸ್ಯರೊಬ್ಬರ ಅಣ್ಣ ಇದರಲ್ಲಿ ಇದ್ದಾರೆ. ಇದು ಮಾನ್ಯ ಅಜಿಬಾಳ್ ಹೆಗಡೆಯವರಿಗೆ ಹಾಗೂ ದೇಶಪಾಂಡೆಯವರಿಗೆ ಗೊತ್ತಿದೆ ನನ್ನ ಉದ್ದೇಶ ಏನೆಂದರೆ, ಇಂತಹವರು ಬಂದು ಆಡತಡೆ ಮಾಡಿದರೂ ಕೂಡಾ ಅವರು ನಮ್ಮ ಪಕ್ಷಕ್ಕೆ ಸೇರಿರುವುದರಿಂದ ಅವರಿಗೆ ಶಿಕ್ಷೆ ಕೊಡುವುದಕ್ಕೆ ನೀವು ಹಿಂಜರಿಯುತ್ತಿದ್ದೀರಿ ಎಂದು ನಾನು ಆಪಾದನೆ ಮಾಡುತ್ತಿದ್ದೇನೆ.

ಅಧ್ಯಕ್ಷರು — ಆಪಾದನೆ ಬೇಕಾಗಿಲ್ಲ, ಈಗ ಪ್ರಶ್ನೆ ಕೇಳಿರಿ. ಆಪಾದನೆ ಏನಿದ್ದರೂ ಡಿಮ್ಯಾಂಡ್ ಬಂದಾಗ ಹೇಳಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್....ಡಿಮ್ಯಾಂಡ್ ಬಂದಾಗ ಅವರು ಇರುವುದೇ ಇಲ್ಲ.

ಅಧ್ಯಕ್ಷರು.—ಇದು ಆಪಾದನೆ ಹಪರ್ ಲಿಲ್ಲ. ಕೊಶ್ಚನ್ ಹವರ್

ಶ್ರೀ ಆರ್. ಎನ್. ನಾಯಕ್.—ಅಲ್ಲಿ ಆಡತಡೆ ಮಾಡುವವರು ಜನತಾ ಪಕ್ಷಕ್ಕೆ ಸೇರಿದ್ದರೂ ಕೂಡಾ ಅವರನ್ನು ಹಿಡಿದು ಶಿಕ್ಷೆ ಕೊಡುತ್ತೀರಾ ಹೇಗೆ ?

ಅಧ್ಯಕ್ಷರು.—ತಪ್ಪಿತಸ್ಥರು ಯಾರಿದ್ದರೂ ಶಿಕ್ಷೆ ಕೊಡುತ್ತೇನೆಂದು ಹೇಳುತ್ತೀರಾ ? ಕಾಂಗ್ರೆಸ್ ನವರು ಇರಲಿ, ಜನತಾದವರು ಇರಲಿ, ತಪ್ಪಿತಸ್ಥರು ಇದ್ದರೆ ಶಿಕ್ಷೆ ಮಾಡುತ್ತೀರಾ ಹೇಳಿ.

ಶ್ರೀ ಕೆ. ಲಕ್ಷ್ಮೀನರಸಿಂಹಯ್ಯ.—ಅಧ್ಯಕ್ಷರೇ, ಮಾನ್ಯ ನಾಯಕ್‌ರವರು ನೇಮಕಾತಿ ಮಾಡಿಕೊಳ್ಳುತ್ತಕ್ಕಂಥ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯವರನ್ನೇ ನೇಮಕ ಮಾಡಿಕೊಳ್ಳುತ್ತೇವೆಂದು ಆದೇಶ ಕೊಡುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತಿದ್ದಾರೆ. ಕಾನೂನು ಪ್ರಕಾರ ಅದು ಆಗುವುದಿಲ್ಲ. ನಾವು ಅವರಿಗೆ ಆದ್ಯತೆ ಕೊಡಬಹುದೇ ಹೊರತು ಬೇರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಹೊಸದಾಗಿ ನಾವು ಬಹಳ ಕಡಿಮೆ ಜನಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಏಕೆಂದರೆ ಈಗಾಗಲೆ ಕೆ.ಪಿ.ಸಿ.ಯಲ್ಲಿ ಬಹಳ ಜನ ಇದ್ದಾರೆ. ಬಹಳ ಜನರನ್ನು ರೆಕ್ರೂಟ್ ಮಾಡಿಕೊಳ್ಳಕ್ಕೆ ಅವಕಾಶ ಇಲ್ಲ. ಜೊತೆಗೆ ನಾವು ಮೇಜರ್ ಪೋರ್ಷನ್ ಆಫ್ ವರ್ಕನ್ನು ಕಾಂಟ್ರಾಕ್ಟ್ ಕೊಡುತ್ತೇವೆ. ಆ ಕಾಂಟ್ರಾಕ್ಟರ್‌ಗಳು ಆಂಧ್ರದಿಂದ ತಮಗೆ ಬೇಕಾದ ಜನಗಳನ್ನು ಕೆಲಸಕ್ಕೆ ಕರೆದುಕೊಂಡು ಬಂದು ಕೆಲಸ ಮಾಡಿಸಬಹುದು, ಅವರು ಸರಿಯಾಗಿ ಕೆಲಸ ಮಾಡತಕ್ಕಂಥ ಹಾಗೂ ಅವರ ಮನಸ್ಸಿಗೆ ಸಮಾಧಾನ ಆಗಂತ ರೀತಿಯಲ್ಲಿ ಕೆಲಸ ಮಾಡುವವರನ್ನು ಕರೆದುಕೊಂಡು ಬರುತ್ತಾರೆ. ಈ ದೃಷ್ಟಿಯಿಂದ ನಾವು ಕಾಂಟ್ರಾಕ್ಟರ್ಸ್ ಮೇಲೂ ಈ ಒತ್ತಡವನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನನ್ನ ಅನಿಸಿಕೆ. ಈಗ ನಾವು ಶರಾವತಿ ಟೇಲ್-ರೇಸ್, ಕಾಳಿ ಸೆಕೆಂಡ್ ಸ್ಟೇಜ್ ಮುಂತಾದ ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಇದಕ್ಕಾಗಿ ನಾವು ವರ್ಲ್ಡ್ ಬ್ಯಾಂಕ್, ಕಾಮೆಟ್ ಫಂಡ್‌ನಿಂದ ಹಣವನ್ನು ಒಪಗಿಸಿಕೊಂಡಿದ್ದೇವೆ. ಯಾವುಯಾವುದಕ್ಕೆ ಹಣ ಒದಗುತ್ತಿದೆ, ಆ ಕಾರ್ಯಗಳನ್ನು ನಾವು ಈಗ ಪ್ರಾರಂಭ ಮಾಡುತ್ತಿದ್ದೇವೆ. ಬೇಡ್ತಿ ಇರಬಹುದು, ಅಘನಾಶಿನಿ ಇರಬಹುದು, ಯಾವುದೇ ಯೋಜನೆ ಇರಬಹುದು, ಇವುಗಳಿಗೂ ಹಣ ಒದಗುವ ಸಂದರ್ಭದಲ್ಲಿ ನಾವು ಅದನ್ನು ಕೂಡ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ವಿದ್ಯುತ್‌ನ ಉತ್ಪಾದನೆ ಮತ್ತು ಬೇಡಿಕೆ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಲು ಈ ಎಲ್ಲಾ ಯೋಜನೆಗಳನ್ನೂ ಪ್ರಾರಂಭ ಮಾಡಬೇಕೆಂದು ಸರಕಾರಕ್ಕೆ ಆಸಕ್ತಿ ಇದೆ. ಆದರೆ ಹಣದ ಕೊರತೆ ಮತ್ತು ಕ್ಲಿಯರೆನ್ಸ್‌ನಿಂದ ನಿಧಾನವಾಗಿದೆ. ಸೆಂಟ್ರಲ್ ಗೌರ್ನ್‌ಮೆಂಟ್ ಕ್ಲಿಯರೆನ್ಸ್ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಕ್ಲಿಯರೆನ್ಸ್ ಸಿಗುವುದು ಬಹಳ ಕಷ್ಟ ಇದೆ. ಇಂತಹ ಸಂದರ್ಭದಲ್ಲಿ ಇದು ನಿಧಾನವಾಗಿರಬಹುದು. ಈ ಒಂದು ಯೋಜನೆಗಳನ್ನೂ ಕೂಡಾ ಆದಷ್ಟು ಬೇಗ ಮಾಡಬೇಕೆಂಬುದು ಸರಕಾರದ ಉದ್ದೇಶ. ಈ ಯೋಜನೆಗಳ ಕೆಲಸಕ್ಕೆ ಅಡ್ಡಿ ಪಡಿಸತಕ್ಕವರ ಮೇಲೆ, ಅವರು ಜನತಾ ಪಕ್ಷದವರೇ ಆಗಿದ್ದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದಾರೆ. ಕೆಲಸ ಪ್ರಾರಂಭ ಮಾಡುವುದಕ್ಕೆ ಹೊರಟಾಗ ಯಾರೇ ಅಡ್ಡಿ ಪಡಿಸಿದರೂ ಅದನ್ನು ನಿವಾರಣೆ ಮಾಡಿಕೊಂಡು ಕೆಲಸ ಮುಂದುವರಿಸಬೇಕಾದುದು ಸರಕಾರದ ಕರ್ತವ್ಯ. ಕೈಗಾ ಯೋಜನೆ ಬಗ್ಗೆ ಅಜಿಬಾಳ್ ಹೆಗಡೆಯವರೇ ಪ್ರಶ್ನೆ ಹಾಕಿ ಇದರ ಬಗ್ಗೆ ಚರ್ಚೆ ಮುಗಿಯುವವರೆಗೆ ಇದನ್ನು ತಡೆ ಹಿಡಿಯುತ್ತೀರಾ ಎಂದು ಕೇಳಿದ್ದರು. ತಡೆ ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ನಾವು ಉತ್ತರ ಕೊಟ್ಟಿದ್ದೆವು.

ಶ್ರೀ ಆರ್ ಎನ್. ನಾಯಕ್.—ಈ ಯೋಜನೆ ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಗ್ರಾಮದ ಹತ್ತಿರ ಕಾರ್ಯಗತವಾಗುತ್ತಿದೆ. ಹೊನ್ನಾವರದಿಂದ ಗೇರುಸೊಪ್ಪೆಗೆ ೩೨ ಕಿಲೋಮೀಟರ್ ಸಾದಾ ರಸ್ತೆ ಇದೆ. ಹಾಗೆಯೇ ಗೇರುಸೊಪ್ಪದಿಂದ ಬೆಂಗಳೂರಿಗೆ ಬಿ. ಟಿ. ರಸ್ತೆ ಇದೆ.

ಈಗ ಅಲ್ಲಿ ಓಡಾಡ ಜಾಸ್ತಿಯಾಗಿರುವುದರಿಂದ ರಸ್ತೆಗಳು ಕೆಟ್ಟು ಹೋಗಿವೆ. ನೀವು ಇಲ್ಲಿ ಶರಾವತಿ ಯೋಜನೆಯನ್ನು ಕೈಗೊಳ್ಳುತ್ತಿರುವುದರಿಂದ ರಸ್ತೆಯನ್ನು ಸರಿ ಮಾಡಬೇಕಾಗುತ್ತದೆ. ಅಲ್ಲಿ ರಸ್ತೆ ಸೇರಿ ಮಾಡಿಕೊಂಡು ವಾಹನಗಳ ಓಡಾಟಕ್ಕೆ ಅಡ್ಡಿಯಾಗದಂತೆ ರೀಪೇರಿ ಕೆಲಸಕ್ಕೆ ಏನಾದರೂ ಸಂಬಂಧಪಟ್ಟ ಇಲಾಖೆಗೆ ಆಥವಾ ಸರ್ಕಾರಕ್ಕೆ ಸಲಹೆ ನೀಡಿದ್ದೀರಾ ? ಆ ಮೇಲೆ ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ಗಿಡಮರಗಳು ಹೋಗುತ್ತವೆ. ಆಷ್ಟು ಜಾಗದಲ್ಲಿ ಅರಣ್ಯ ಸಹ ಹೋಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಶವಾಗತಕ್ಕಂಥ ಅರಣ್ಯವನ್ನು ಉಳಿಸುವ ಸಲುವಾಗಿ ಅಲ್ಲಿ ಖಾಲಿ ಇರುವಂತಹ ಜಾಗದಲ್ಲಿ ಏನಾದರೂ ಗಿಡಮರಗಳನ್ನು ನೆಟ್ಟು ಆಷ್ಟೇ ಪ್ರಮಾಣದ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಬದಲಿ ಅರಣ್ಯವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಸುತ್ತಿರೋ ಆಥವಾ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಬೆಳೆಸುತ್ತೀರೋ ? ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಸಿ ಕಾಗದ ತಯಾರು ಮಾಡುವವರಿಗೆ ಕೊಡಲು ಹೊರಟಿದ್ದಾರೆ ಎನ್ನುವ ಆಪಾದನೆ ಸಹ ಇದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡ ಬೇಕು ? ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡ ಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮೀಸರಸಿಂಹಯ್ಯ :— ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ನಾವು ಕಳೆದುಕೊಳ್ಳು ತಕ್ಕಂಥ ಕಾಡಿಗೆ ಬದಲಾಗಿ ಆಷ್ಟೇ ವಿಸ್ತೀರ್ಣದಲ್ಲಿ ನಡು ತೋಪುಗಳನ್ನು ಮಾಡಬೇಕೆಂದು ಅದಕ್ಕೆ ಬೇಕಾದ ನಿಯಮಗಳನ್ನು ಸಹ ರೂಪಿಸಲಾಗಿದೆ. ಅರಣ್ಯ ಇಲಾಖೆಗೆ ಇದನ್ನು ವಹಿಸಿ ಮುಳಗಡೆಯಾಗ ತಕ್ಕ ಪ್ರದೇಶದಲ್ಲಿ ಬದಲಿ ಅರಣ್ಯವನ್ನು ಬೆಳೆಸುವುದಕೆ ಸರ್ಕಾರದವರು ಸುಮಾರು ೭೭ ಲಕ್ಷ ರೂಪಾಯಿ ಗಳ ಒಂದು ಅಂದಾಜು ತಯಾರು ಮಾಡಿ ಇಲಾಖೆಗೆ ಕೊಟ್ಟಿದ್ದೇವೆ. ಇದಕ್ಕೆ ಹಣವನ್ನು ನಾವು ಹಂತ ಹಂತವಾಗಿ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ನೆಡಂತೋಪು ಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತು ಒಂದು ಯುನಿಟ್ ಏದ್ಯುಚ್ಛಕ್ತಿ ಬೆಲೆ ಎಷ್ಟು ಬೀಳಬಹುದೆಂದು ತಾವು ಆಗಲೇ ಕೇಳಿದಿರಿ ಅದಕ್ಕೆ ಒಂದು ಯೂನಿಟ್‌ಗೆ ೫೦ ಪೈಸೆ ಬೀಳುತ್ತದೆ. ಅಲ್ಲಿ ಅವಕಾಶ ಇಲ್ಲದಿದ್ದರೆ ನಾವು ಆಷ್ಟೇ ಪ್ರಮಾಣದ ಅರಣ್ಯವನ್ನು ಜಾಗ ಸಿಗುವಂತಹ ಕಡೆ ಬೆಳೆಸ ಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವಕಾಶವಿದ್ದ ಸಾಕಷ್ಟು ಜಮೀನು ಸಿಕ್ಕಿದರೆ ಖಂಡಿತ ವಾಗಿ ಅಲ್ಲಿಯೇ ಅರಣ್ಯವನ್ನು ಬೆಳೆಸುತ್ತೇವೆ. ಅಲ್ಲಿ ಸಿಗದಿದ್ದರೆ ಬೇರೆ ಕಡೆ ಅರಣ್ಯವನ್ನು ಬೆಳೆಸಬೇಕಾಗು ತ್ತದೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ರೀಲಿಂಗ್ ಕೇಂದ್ರ ಸ್ಥಾಪಿಸುವುದು.

೧೩೭೭. ಶ್ರೀ ಎನ್. ಹೆಚ್. ಗೌಡ(ಕುಮಟಾ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ಹಳ್ಳಿಗಳೆಷ್ಟು ?

ಆ) ಆ ಹಳ್ಳಿಗಳ ಜನರು ರೇಷ್ಮೆ ರೀಲಿಂಗ್ ಮಾಡಲು ಕಷ್ಟ ಅನುಭವಿಸುತ್ತಿರುವುದಂ ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಇ) ಶೀಘ್ರವೇ ಸದರಿ ಜಿಲ್ಲೆಯಲ್ಲಿ ಒಂದು ರೀಲಿಂಗ್ ಕೇಂದ್ರವನ್ನು ತೆಗೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಶಾಖೆ ಸಚಿವರು).—

ಅ) ೬೫೩ ಹಳ್ಳಿಗಳು.

ಆ) ಬಂದಿರುವುದಿಲ್ಲ.

ಇ) ರೀಲಿಂಗ್ ಕೇಂದ್ರವನ್ನು ತೆರೆಯಲಾಗಿದೆ.